ಈ) ಯೋಜನಾ ವರದಿಗೆ ಜಿಲ್ಲಾ ಮಟ್ಟದ ಅನುಷ್ಠಾನ ಸಮಿತಿಯಿಂದ ಅನುಮೋದನೆ ದೊರಕಿದ ಕೂಡಲೇ ಹಣವನ್ನು ಬಿಡುಗಡೆ ಮಾಡಲಾಗುವುದು

442 **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿಗ್ಗಾಂವ ತಾಲೂಕಾ ಬಾಡಾ ಗ್ರಾಮದ ಸಂತ ಶ್ರೀ ಕನಕದಾಸರು ಜನ್ಮ ತಾಳಿದ ಸು–ಕ್ಷೇತ್ರವಾಗಿದ್ದರೂ ಇಲ್ಲಿಯವರೆವಿಗೂ ಯಾವುದೇ ಅಭಿವೃದ್ಧಿ ಕಾಣದೇ ಅತೀ ಹಿಂದುಳಿದ ಗ್ರಾಮವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ,

ಆ) ಹಾಗಿದ್ದಲ್ಲಿ ಬಾಡಾ ಗ್ರಾಮವು ಭಾವೈಕ್ಯತೆಯ ಕೇಂದ್ರವಾಗಿರುವುದರಿಂದ ಸಂತ ಶ್ರೀ ಕನಕದಾಸರ ಪ್ರಾಧಿಕಾರವನ್ನು ಸ್ಥಾಪಿಸಲು ಸರ್ಕಾರ ಕ್ರಮಕೈಗೊಳ್ಳುವುದೇ,

ಇ) ಹಾಗಿದ್ದಲ್ಲಿ ಯಾವಾಗ ಸ್ಥಾಪನೆ ಮಾಡಲಾಗುವುದು?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು)

ಅ) ಬಂದಿದೆ

ಆ) ಸರ್ಕಾರವು ಈಗಾಗಲೇ ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರ ಅಧಿನಿಯಮವನ್ನು ಜಾರಿಗೊಳಿಸಲು ಕ್ರಮ ಕೈಗೊಳ್ಳಲಾಗಿದೆ ಹಾಗೂ ಈ ಅಧಿನಿಯಮಯವನ್ನು ಜಾರಿಗೆ ಬರುವುದನ್ನು ಬಾಕಿ ಇಟ್ಟು ಕಾಗಿನೆಲೆ ಅಭಿವೃದ್ಧಿ ಪ್ರಾಧಿಕಾರವನ್ನು ಕಾರ್ಯಾದೇಶದ ಮೂಲಕ ಸರ್ಕಾರಿ ಆದೇಶ ನಂ ಕಂಇ ಆರ್‌ಇಹೆಚ್ 2005 ದಿನಾಂಕ 11 1 2007 ರಂದು ರಚನೆ ಮಾಡಿರುತ್ತದೆ ಅದರಲ್ಲಿ ಬಾಡಾ ಗ್ರಾಮದ ಅಭಿವೃದ್ಧಿಯ ಬಗ್ಗೆ ಆದ್ಯತೆ ಮೇಲೆ ಪರಿಗಣಿಸಲಾಗಿದೆ

ಇ) ಉದ್ಭವಿಸುವುದಿಲ್ಲ

443 (637) **ಶ್ರೀ ಸಿಂಧೂರ ಜಿ ರಾಜಶೇಖರ (ಶಿಗ್ಗಾಂವ್)** ಮಾನ್ಯ ನಾರಿಗೆ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ನವಣೂರ ಬಸ್ ಘಟಕದಲ್ಲಿರುವ ಅನೇಕ ಬಸ್‌ಗಳು ಸುಮಾರು 8 ಲಕ್ಷ ಕಿ ಮೀಗಿಂತ ಹೆಚ್ಚಿಗೆ ಓಡಿ ನಿರುಪಯುಕ್ತ (ಸ್ಕ್ರ್ಯಾಪ್) ಹಾಗೂ ಕವಚಗಳು ಸರಿಯಿಲ್ಲದೆ ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನದಲ್ಲಿದೆಯೇ,

ಆ) ನವಣೂರ ಬಸ್ ಘಟಕದಿಂದ ಇನ್ನೂ ಅನೇಕ ಹೊಸ ಅನುಸೂಚಿಗಳನ್ನು ಕಾರ್ಯಾಚರಣೆಗೆ ತರಲು ಸರ್ಕಾರ ಯಾವಾಗ ಕ್ರಮ ಕೈಗೊಳ್ಳುತ್ತದೆ?

ಶ್ರೀ ಚಲುವರಾಯಸ್ವಾಮಿ (ಸಾರಿಗೆ ಸಚಿವರು)

ಅ) ಹೌದು

ಈ ಘಟಕದಲ್ಲಿ 8 ವಾಹನಗಳು ಮಾತ್ರ 8 ಲಕ್ಷ ಕಿ ಮೀಗಳು ಕ್ರಮಿಸಿದ್ದು, ಎಲ್ಲಾ ವಾಹನಗಳು ಸುಸ್ಥಿತಿಯಲ್ಲಿರುತ್ತದೆ

ಆ) 2006–07ನೇ ಮತ್ತು 2007–08 ನೇ ಸಾಲಿನ ಕ್ರಿಯಾ ಯೋಜನೆಯಡಿಯಲ್ಲಿ ನವಣೂರ ಘಟಕದಿಂದ 8 ಹೊಸ ಅನುಸೂಚಿಗಳನ್ನು ಕಾರ್ಯಾಚರಣೆಗೊಳಿಸಲು ಕ್ರಮಕೈಗೊಳ್ಳಲಾಗುತ್ತಿದೆ

444 (451) **ಶ್ರೀ ಶ್ರೀನಿವಾಸಗೌಡ ಕೆ (ಕೋಲಾರ)** ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೋಲಾರ ಜಿಲ್ಲೆಯ ಗ್ರಾಮಾಂತರ ಪ್ರದೇಶದಲ್ಲಿ ಲೋಡ್ ಶೆಡ್ಡಿಂಗ್ ವಿದ್ಯುಚ್ಛಕ್ತಿ ಇಲ್ಲದೆ ಎಷ್ಟು ಗಂಟೆ ವಿದ್ಯುತ್ ನ್ನು ಒದಗಿಸಲಾಗುತ್ತಿದೆ,

ಆ) ಹಾಗಿದ್ದಲ್ಲಿ, ಇದುವರೆವಿಗೂ ಲೋಡ್ ಶೆಡ್ಡಿಂಗ್ ಇಲ್ಲದೆ ಎಷ್ಟು ಗಂಟೆ ಕಾಲ ವಿದ್ಯುಚ್ಛಕ್ತಿ ಕೊಡಲಾಗಿದೆ,

ಇ) ಜಿಲ್ಲೆಯಲ್ಲಿ ವಿದ್ಯುತ್ ಕೊರತೆಯಿಂದ ಬೆಳೆ ನಾಶವಾಗಿರುವುದು ನಿಜವಲ್ಲವೆ,

ಈ) ರಾಜ್ಯದ ವಿದ್ಯುಚ್ಛಕ್ತಿ ಉತ್ಪಾದನೆ ಮಾಡುವ ಎಲ್ಲಾ ನದಿಗಳು ತುಂಬಿದ್ದರೂ ಕೂಡ ದಿನಕ್ಕೆ 16 ಗಂಟೆ ವಿದ್ಯುಚ್ಛಕ್ತಿ ಒದಗಿಸದೇ ಇರಲು ಕಾರಣಗಳೇನು,

ಉ) ನಗರ ಪ್ರದೇಶ ವ್ಯಾಪ್ತಿಯಲ್ಲಿ ವಿದ್ಯುಚ್ಛಕ್ತಿ ಕೊರತೆಯನ್ನು ನೀಗಿಸಲು ಪರಿಹಾರಗಳೇನು?

ಶ್ರೀ ಹೆಚ್ ಡಿ ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು)

ಅ) ಮತ್ತು ಆ) ರಾಜ್ಯಾದ್ಯಂತ ಗ್ರಾಮಾಂತರ ಪ್ರದೇಶಗಳಲ್ಲಿ ಸಾಮಾನ್ಯವಾಗಿ ದಿನವಹಿ 9 ಗಂಟೆಗಳ ಅವಧಿಗೆ 3 ಫೇಸ್ ನಲ್ಲಿ 9 ಗಂಟೆಗಳ ಅವಧಿಗೆ ಸಿಂಗಲ್‌ಫೇಸ್‌ನಲ್ಲಿ ವಿದ್ಯುತ್ ಸರಬರಾಜು ಮಾಡಲಾಗುತ್ತಿದೆ ಬಾಕಿ